**ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ ಃ ಕಾರವಾರ**

**ಸ್ಪೆಷಲ್ ಕೇಸ್ ನಂಃ 24/2015**

ದೋ.ಸಾ. ಪ್ರಾ.ಸಾ. 3

ಸಾಕ್ಷಿಯ ಹೆಸರುಃ-- ಜಯಾ

ಗಂಡನ ಹೆಸರುಃ--- ಕೀರ್ತಿದಾಸ ಮಂಡಲ

ವಯಸ್ಸುಃ--- 42 ವರ್ಷ

ಕೆಲಸಃ--- ಬೇಬಿಸಿಟ್ಟಿಂಗ್ ಕೆಲಸ

ವಾಸಃ--- ಹೊನ್ನಾವರ

ದಿನಾಂಕಃ— 11.04.2018 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆ ಃ ಸರಕಾರಿ ಅಭಿಯೋಜಕರಿಂದಃ-

1. ನನಗೆ ಮೃತ ಶಬರೀನ ಇವಳ ಪರಿಚಯ ಇತ್ತು, ಅವಳ ಮನೆ ನಮ್ಮ ಮನೆಯ ಹತ್ತಿರ ಇತ್ತು, ನನಗೆ ಆರೋಪಿಯ ಪರಿಚಯ ಇದೆ. ಆರೋಪಿಯು ಶಬರೀನ್‌ಳ ಭಾವನ ಹೆಂಡತಿ ಆಗಬೇಕು. ಮೃತ ಶಬರೀನ ಹಾಗೂ ಆರೋಪಿ ಒಂದೇ ಮನೆಯಲ್ಲಿ ಬೇರೆ ಬೇರೆ ಭಾಗ ಮಾಡಿಕೊಂಡು ವಾಸಮಾಡಿಕೊಂಡಿದ್ದರು. ಆರೋಪಿ ಹಾಗೂ ಶಬರೀನ್‌ಳ ಗಂಡಂದಿರು ವಿದೇಶದಲ್ಲಿ ವಾಸವಾಗಿದ್ದಾರೆ. ಮೃತ ಶಬರೀನ ಹಾಗೂ ಆರೋಪಿ ಶಬೀನಾ ಇವರ ನಡುವೆ ಒಳಒಳಗೇ ಜಗಳವಿತ್ತು, ಈ ವಿಷಯವನ್ನು ನನ್ನ ಮುಂದೆ ಮೃತ ಶಬರೀನ ಹೇಳುತ್ತಿದ್ದಳು. ನಾನು ಶಬರೀನ್‌ಳಿಗೆ ಅವಳು ವಿಷಯ ಹೇಳಿದಾಗ ಅವಳಿಗೆ ಸಮಾಧಾನ ಪಡಿಸುತ್ತಿದ್ದೆನು ಮತ್ತು ನಿನ್ನ ಗಂಡ ಬಂದ ನಂತರ ಅದನ್ನು ಬಗೆಹರಿಸಿಕೊಳ್ಳಿರಿ ಎಂದು ಹೇಳುತ್ತಿದ್ದೆನು.

2. ದಿನಾಂಕಃ 11.02.2015 ರಂದು ನಾನು ಹಾಗೂ ಶಬರೀನ ಇಬ್ಬರೂ ಒಟ್ಟಿಗೆ ನಮ್ಮ ಸಂಘಕ್ಕೆ ಹೋಗಿದ್ದೆವು. ಆ ನಂತರ ಒಟ್ಟಾಗಿ ತಿರುಗಿ ಬಂದೆವು. ನಾವು ಸಂಘಕ್ಕೆ ಹೋದಾಗ ಶಬರೀನಳು ತನ್ನ ಹಾಗೂ ಆರೋಪಿಯ ನಡುವೆ ಜಗಳವಾಗಿದೆ ಎಂದು ವಿಷಯ ತಿಳಿಸಿದಳು. ನಾವು ಸಂಘದಿಂದ ಬೆಳಿಗ್ಗೆ 11.30 ಗಂಟೆಗೆ ವಾಪಾಸು ಬಂದೆವು. ದಿನಾಂಕಃ 11.02.2015 ರಂದು ಸಾಯಂಕಾಲ 7.30 ಗಂಟೆಗೆ ನಾನು ನಮ್ಮ ಮನೆಯಲ್ಲಿದ್ದಾಗ ಮೃತ ಶಬರೀನ ಇವಳ ಮನೆಯಲ್ಲಿ ಶಬ್ದವಾದದ್ದು ಕೇಳಿಸಿತು. ನಾನು ಶಬರೀನಳ ಮನೆಯ ಒಳಗೆ ಹೋಗಿ ನೋಡಿದಾಗ ಅವಳ ಮೈಗೆ ಬೆಂಕಿ ತಗಲಿದ್ದು ಕಂಡು ಬಂದಿತು. ಆ ನಂತರ ನಾನು ಹಾಗೂ ಚಾಸಾ.10 ಜುಬೆದಾ

ಇಬ್ಬರೂ ಸೇರಿಕೊಂಡು ಶಬರೀನಳಿಗೆ ಹಚ್ಚಿದ್ದ ಬೆಂಕಿಯನ್ನು ನೀರಿನ ಮೂಲಕ ಆರಿಸಿದೆವು. ಆ ನಂತರ ಹಾಗೂ ಚಾಸಾ.10 ಜುಬೇದಾ ಕೂಡಿಕೊಂಡು ಮೃತ ಶಬರೀನಳನ್ನು ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋದೆವು. ಶಬರೀನಳಿಗೆ ಆಸ್ಪತ್ರೆಗೆ ಸೇರಿಸಿದಾಗ ಅವಳು ಮಾತನಾಡುವ ಪರಿಸ್ಥಿತಿಯಲ್ಲಿರಲಿಲ್ಲ, ಅವಳ ಸ್ಥಿತಿ ಗಂಭೀರವಾಗಿತ್ತು, ಆ ನಂತರ ಪೋಲೀಸರು ಅಲ್ಲಿಗೆ ಬಂದಾಗ ಅವಳು ಸ್ವಲ್ಪ ಸ್ವಲ್ಪ ಮಾತನಾಡುತ್ತಿದ್ದಳು. ಶಬರೀನ ಪೋಲೀಸರ ಮುಂದೆ ಆರೋಪಿ ಶಬೀನಾ ಇವಳು ತನ್ನ ಮೇಲೆ ಸೀಮೆ ಎಣ್ಣೆ ಹಾಕಿ ಬೆಂಕಿ ಹಚ್ಚಿದ್ದಾಳೆಂದು ವಿಷಯ ತಿಳಿಸಿದಳು. ಆ ನಂತರ ಅವಳನ್ನು ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿಗೆ ಕರೆದುಕೊಂಡು ಹೋಗಲಾಯಿತು. ಅಲ್ಲಿ ಅವಳು ತೀರಿಕೊಂಡಳು.

3. ಆ ನಂತರ ಪೋಲೀಸರು ಮರುದಿನ ಸ್ಥಳಕ್ಕೆ ಬಂದಿದ್ದರು. ಪೋಲೀಸರು ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿದರು. ಪಂಚನಾಮೆ ಮಾಡಲು ಪೋಲೀಸರಿಗೆ ಜಾಗೆಯನ್ನು ನಾನೇ ತೋರಿಸಿದ್ದೇನೆ. ಪೋಲೀಸರು ಪಂಚನಾಮೆ ಮಾಡುವ ಕಾಲಕ್ಕೆ ಸ್ವಲ್ಪ ಸೀಮೆ ಇದ್ದ ಬಾಟಲಿಯನ್ನು, ಅವಳ ಬ್ರಾವನ್ನು , ನೈಟಿಯನ್ನು , ಲಂಗವನ್ನು ಹೀಗೆ 4-5 ವಸ್ತುವನ್ನು ಜಪ್ತಿಮಾಡಿಕೊಂಡರು. ಸ್ಥಳದಲ್ಲಿ ಪೋಲೀಸರು ಫೋಟೋವನ್ನು ತೆಗೆದರು. ಆ ದಿನ ಪೋಲೀಸರು ನನ್ನ ಸಮಕ್ಷಮ ಮಾಡಿದ ಪಂಚನಾಮೆಯನ್ನು ಮತ್ತು ಅದರ ಮೇಲಿದ್ದ ನನ್ನ ಸಹಿ ನೋಡಿದರೆ ಗುರುತಿಸುತ್ತೇನೆ. ಆ ಪಂಚನಾಮೆಯನ್ನು ನಿಪಿ.7 ಎಂದು ಗುರುತಿಸಲಾಯಿತು. ನಿಪಿ.7ಎ ನನ್ನ ಸಹಿ ಇದೆ. ಮಹಜರ ಕಾಲಕ್ಕೆ ಪೋಲೀಸರು ತೆಗೆದ ಮೂರು ಫೋಟೋಗಳನ್ನು ಗುರುತಿಸುತ್ತೇನೆ. ಅವುಗಳನ್ನು ನಿಪಿ.8, 9 ಹಾಗೂ 10 ಎಂದು ಗುರುತಿಸಲಾಯಿತು. ಆ ದಿನ ಜಪ್ತಿ ಮಾಡಿದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಮು ಮಾ 1 ರಿಂದ 5 ಎಂದು ಗುರುತಿಸಲಾಯಿತು. ಪೋಲೀಸರು ಪಂಚನಾಮೆ ಮಾಡುವ ಕಾಲಕ್ಕೆ ನಕಾಶೆಯನ್ನು ಕೂಡ ತೆಗೆದಿದ್ದರು. ಅದನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ನಿಪಿ.11 ಎಂದು ಗುರುತಿಸಲಾಯಿತು. ನಿಪಿ.11ಎ ನನ್ನ ಸಹಿ ಇದೆ. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ

4. ನಾನು ಘಟನೆಯ ಬಗ್ಗೆ ಈ ದಿನ ಓದಿದ್ದರಿಂದ ನನಗೆ ಈ ಬಗ್ಗೆ ಗೊತ್ತಾಗಿದೆ ಎಂದರೆ ನಿಜ. ನನ್ನ ಹೇಳಿಕೆಯನ್ನು ಪೋಲೀಸರು ಪಡೆದುಕೊಂಡಿದ್ದಾರೆ. ಪೋಲೀಸರೇ ನಮ್ಮ ಮನೆಗೆ

ಬಂದು ಹೇಳಿಕೆ ಪಡೆದುಕೊಂಡಿದ್ದಾರೆ. ಪೋಲೀಸರು ನನ್ನ ಹೇಳಿಕೆ ಬರೆದುಕೊಂಡ ನಂತರ ಅದರಲ್ಲಿ ಓನು ಬರೆಯಲಾಗಿದೆ ಎಂದು ನನಗೆ ಗೊತ್ತಿದೆ. ನಮ್ಮ ಮನೆಯಿಂದ ಶಬರೀನಳ ಮನೆ ಸುಮಾರು 5 ನಿಮಿಷದ ದಾರಿ ಇದೆ. ಆರೋಪಿಯನ್ನು ಈ ಮುಂಚೆ ಅವರ ಮನೆಯಲ್ಲಿ ನೋಡಿದ್ದೇನೆ. ನಾನು ಶಬರೀನಳ ಮನೆಯ ಒಳಗೆ ಹೋಗಿ ಮತ್ತು ಆರೋಪಿಯ ಮನೆಯ ಒಳಗೆ ಹೋಗಿ ಬಂದು ಮಾಡಿಲ್ಲಾ. ಘಟನೆ ಆದ ದಿನ ನಾನು ನಮ್ಮ ಮನೆಯಲ್ಲಿ ಇದ್ದೆನು. ಘಟನೆಯು ಸಾಯಂಕಾಲ 7.30 ಕ್ಕೆ ಆಗಿದೆ ಎಂದು ಪೋಲೀಸರು ಹೇಳಿದ್ದಾರೆ. ನಾನು ಘಟನೆಯಾದ ದಿನ ಅಲ್ಲಿ ಇರಲಿಲ್ಲ ಮತ್ತು ಗಾಯಾಳುವನ್ನು ಆಸ್ಪತ್ರೆಗೆ ಕರೆದುಕೊಂಡು ಆಟೋದಲ್ಲಿ ಹೋಗಿಲ್ಲಾ ಎಂದರೆ ಸರಿಯಲ್ಲ. ನಾನು ಹಾಗೂ ಚಾಸಾ.10 ಶಬರೀನಳನ್ನು ಆಟೋದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಅವಳ ಜೊತೆ ಇದ್ದೆವು. ಘಟನೆಯಾದ ದಿನ ನಾನು ಶಬರೀನಳ ಮನೆಯ ಒಳಗಡೆ ಹೋಗಿ ನೋಡಲಿಲ್ಲ ಆದರೆ ಹೊರಗಡೆಯಿಂದ ನೋಡಿದ್ದೇನೆ. ಶಬರೀನಳು ಮೈಯೇಲ್ಲಾ ಸುಟ್ಟುಕೊಂಡಿದ್ದನ್ನು ನೋಡುವ ಮುಂಚೆಯೇ ನಾನು ಪೋಲೀಸರಿಗೆ ಫೋನ ಮಾಡಿದ್ದೇನೆ. ಶಬರೀನಳ ತಾಯಿ ನನಗೆ ಪೋಲೀಸರಿಗೆ ಫೋನ ಹಚ್ಚಲು ಹೇಳಿದಳು. ಶಬರೀನಳ ಮೈಮೇಲೆ ಘಟನೆಯಾಗುವ ಸಮಯದಲ್ಲಿ ನೈಟಿ ಇತ್ತು, ಶಬರೀನಳ ತಲೆಗೆ, ಎದೆಯ ಭಾಗದಲ್ಲಿ ಸುಟ್ಟ ಗಾಯಗಳು ಆಗಿದ್ದವು. ಶಬರೀನ ಸುಟ್ಟುಕೊಂಡ ದಿನ ಅವಳು ಸುಟ್ಟುಕೊಂಡ ಮೇಲೆ ಅವಳ ಜೊತೆ ನನ್ನ ಮಾತುಕತೆ ಆಗಲಿಲ್ಲ, ಶಬರೀನ ವೈಯಕ್ತಿಕವಾಗಿ ನನ್ನ ಮುಂದೆ ಘಟನೆಯ ಬಗ್ಗೆ ಹೇಳಿಲ್ಲಾ.

<u>ಮರು ವಿಚಾರಣೆಃ – ಇಲ್ಲಾ -</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ

(ವಿ.ಎಸ್.ಧಾರವಾಡಕರ)

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ, ಕಾರವಾರ

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಆತನ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು.)**

ಪಾಟೀ ಸವಾಲುಃ ವಿಶೇಷ ಸರಕಾರಿ ಅಭಿಯೋಜಕರಿಂದಃ

2. ದಿನಾಂಕಃ